# ಚಿತ್ರದುರ್ಗದ ಕೋಟೆ ಗೋಡೆ

ದುರ್ಗದ ಪಾಳೇಗಾರರು ಪೌರುಷ, ಸ್ವಾಭಿಮಾನ, ಆತ್ಮ ವಿಶ್ವಾಸದಿಂದ ನಿರ್ಮಾಣ ಮಾಡಿದ ಏಳು ಸುತ್ತಿನ ಕೋಟೆಗಳು, ಇದರೊಳಗೆ ಸಪ್ತಶೃಂಗ ಪರ್ವತ ಶ್ರೇಣಿ, ಲಾಲ್ ಬತೇರಿ (ಕೆಂಪು ಬತೇರಿ), ಮಧ್ಯೆ ರಣಮಂಡಲ ಬತೇರಿ. ಪಾಳೇಯಗಾರರು ಈ ಭಾಗಕ್ಕೆ ಕೊಟ್ಟಿರುವ ಒತ್ತು ಅದ್ಭುತ. ಇಲ್ಲಿಗೆ ಹೋಗಬೇಕಾದರೆ ಶ್ರೀ ಗೋಪಾಲಸ್ವಾಮಿ ದೇವಸ್ಥಾನದ ಹಿಂಭಾಗ ರಸ್ತೆಯಿಂದ, ಬೆಟ್ಟದ ತುದಿಗೆ ಸಾಗಲು (1000) ಒಂದು ಸಾವಿರ ಮೆಟ್ಟಿಲು ಕ್ರಮಿಸಬೇಕು. ಅದೊಂದು ದುರ್ಗಮ ಮಾರ್ಗ.

ಕೋಟೆ ರಕ್ಷಣೆಗಾಗಿ ವಜ್ರಗಾರೆ (ಗಚ್ಚು) ಇಟ್ಟಿಗೆಯಿಂದ ಕಮಾನಾಕೃತಿಯಲ್ಲಿ ಅದ್ಭುತ ರಚನೆ ಮಾಡಲಾಗಿದೆ. ಸುಸ್ಥಿತಿಯಲ್ಲಿರುವ ಈ ಕೋಟೆ ಗೋಡೆ ನೋಡಿದರೆ ಇಲ್ಲಿ ಯುದ್ಧ ನಡೆದ ಯಾವ ಕುರುಹೂ ಕಾಣುವುದಿಲ್ಲ. ಏಕೆಂದರೆ ಟಂಕಸಾಲೆ, ಅರಮನೆ ಆವರಣ ಎಲ್ಲಾ ದಾಟಿ ಮುಂದೆ ಬರಬೇಕು. ಅವೆರಡು ಶತ್ರು ವಶವಾದರೆ ಯುದ್ಧ ಮುಗಿದೇ ಹೋಯಿತು. ಹೀಗಾಗಿ ಈ ಕೋಟೆ ತನ್ನ ಸ್ವರೂಪ ಬದಲಿಸಿಲ್ಲ. ಅಂದಿನ ತಾಂತ್ರಿಕ ಕೌಶಲ್ಯತೆಗೆ ಮೂಕಸಾಕ್ಷಿಯಾಗಿದೆ. ಇದರ ಮಧ್ಯದಲ್ಲಿ ಸಿಗುವ ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟದಲ್ಲಿ ನಿಂತು ಬಯಲು ವೀಕ್ಷಿಸಿದರೆ ರುದ್ರರಮಣೀಯ ದೃಶ್ಯ ಕಾಣಿಸುತ್ತದೆ. ಆದರೆ ಇಲ್ಲಿಗೆ ಯಾರೊಬ್ಬ ಪ್ರವಾಸಿಯೂ ಬರುತ್ತಿಲ್ಲ. ಇದು ನಿಜಕ್ಕೂ ದುರ್ಗದ 'ಚೈನಾ ವಾಲ್'.

**ಚಿತ್ರ- ಬರಹ: ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**





# ಜನಪದ ಹಾಡುಗಳ ದಾಸಯ್ಯ

ಕನ್ನಡ ಜನಪದ ಸಾಹಿತ್ಯವನ್ನು ಊರಿಂದ ಊರಿಗೆ, ಕೇರಿಯಿಂದ ಕೇರಿಗೆ, ಹಾಡುಗಳ ಮೂಲಕ ಪಸರಿಸುವ ದಾಸಯ್ಯ ಜನಾಂಗದ ಜನ ಬರಬರುತ್ತ ಅಪರೂಪವಾಗುತ್ತಿದ್ದಾರೆ. ಜನಪದ ಹಾಡುಗಳೇ ಇರಲಿ, ಶರಣರ ವಚನಗಳೇ ಇರಲಿ, ದಾಸರ ಪದ್ಯಗಳೇ ಇರಲಿ ಅವುಗಳನ್ನು ತಮ್ಮ ಹಾಡುಗಾರಿಕೆಯಿಂದ ಜನರಿಗೆ ಮುಟ್ಟಿಸುವ ಕಾರ್ಯವನ್ನು ಅವರು ಮಾಡುತ್ತಾರೆ. ಜನಪದ ಸಾಹಿತ್ಯ ಇಂಥ ಜನರಿಂದಲೇ ಈಗಲೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ ಎನ್ನಬಹುದು. ಇದರಿಂದಲೇ ಅವರ ಉದರ ಪೋಷಣೆಯೂ ನಡೆಯುತ್ತಿತ್ತು. ಅಂತಹ ಒಬ್ಬ ದಾಸಯ್ಯ ನಮ್ಮ ಮನೆಯ ಬಾಗಿಲಿಗೆ ಬಂದಾಗ ತೆಗೆದ ಚಿತ್ರವಿದು.

**-ಕೆ.ಪಿ. ರಾಮಗುಂಡಿ, ಬೈಲಹೊಂಗಲ**

# ಟೋಕಿಯೊ ಸ್ಕೈಟ್ರಿ!

ನಮ್ಮ ಇತ್ತೀಚಿನ ಜಪಾನ್ ಪ್ರವಾಸದಲ್ಲಿ ನಾವು ನೋಡಿದ ಟೊಕಿಯೊ ಸ್ಕೈಟ್ರಿ ಇದು. ಪ್ರಪಂಚದ ಎತ್ತರದ ವಿಕ್ಷಣಾ ಗೋಪುರ. ಎತ್ತರ 634 ಮೀಟರ್. 2011ರಲ್ಲಿ 'ಪ್ರಪಂಚದ ಎತ್ತರದ ಗೋಪುರ' ಎಂದು ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಸೇರಿದೆ.

ಇದರಲ್ಲಿ ಬ್ರಾಡ್‌ಕಾಸ್ಟಿಂಗ್ ಟವರ್, ಹೋಟೆಲ್, ಸ್ಕೈಟ್ರಿ ಶಾಪ್, ಫೋಟೋ ತೆಗೆಯುವ ವ್ಯವಸ್ಥೆ ಮೊದಲಾದವುಗಳಿವೆ. 350ನೇ ಅಂತಸ್ತಿನಲ್ಲಿ ಸ್ಕೈಟ್ರೀ ಕೆಫೆ ಇದೆ. (ನಿಂತು ಕೊಂಡು ತಿನ್ನುವ ವ್ಯವಸ್ಥೆ). 345ರಲ್ಲಿ ಕುಳಿತು ತಿನ್ನುವ ವ್ಯವಸ್ಥೆ ಇದೆ. 350ನೇ ಅಂತಸ್ತಿನವರೆಗೆ ಒಂದು ಟಿಕೆಟ್, 450ನೇ ಅಂತಸ್ತಿನಿಂದ ಮತ್ತೊಂದು ಟಿಕೆಟ್ ತೆಗೆದುಕೊಳ್ಳಬೇಕು. ರೈಲ್ವೆ ಟೊಬು (Tobu)ಸ್ಕೈಟ್ರಿ ಲೈನ್ ಇಲ್ಲಿ ಹಾದು ಹೋಗುತ್ತದೆ.

**-ಪ್ರಭಾ ಪಿ. ಶಾಸ್ತ್ರಿ, ಶಿವಮೊಗ್ಗ**

